ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	::	**1500**
ಸದಸ್ಯರ ಹೆಸರು	::	**ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸುವ ದಿನಾಂಕ	::	**17.03.2021**
ಉತ್ತರಿಸುವ ಸಚಿವರು	::	**ಪಶುಸಂಗೋಪನೆ ಸಚಿವರು**

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಏಕೈಕ ಪಶು ವಿಶ್ವವಿದ್ಯಾಲಯವು ಇದ್ದು, ವಿಭಜನೆ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ವಿಭಜನೆ ಮಾಡಲು ಕಾರಣವೇನು;	ಪ್ರಸ್ತುತ ಪಶುವೈದ್ಯಕೀಯ ವಿಶ್ವವಿದ್ಯಾಲಯದ ವಿಭಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಆ)	ಈ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಒದಗಿಸಿದ್ದ ಅನುದಾನವೆಷ್ಟು; ಅದರಲ್ಲಿ ಖರ್ಚಾದ ಹಣ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)	ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಒದಗಿಸಿರುವ ಅನುದಾನ ಹಾಗೂ ಖರ್ಚಾದ ಹಣದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಈ ವಿಶ್ವವಿದ್ಯಾಲಯದಲ್ಲಿ ಒಟ್ಟಾರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸರ್ಕಾರದಿಂದ ನೇಮಕಗೊಂಡ ಸಿಬ್ಬಂದಿಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ವಿಶ್ವವಿದ್ಯಾಲಯದಲ್ಲಿ ಒಟ್ಟಾರೆ ಸಿಬ್ಬಂದಿಗಳ ಸಂಖ್ಯೆ, ನೇಮಕಗೊಂಡ ಸಿಬ್ಬಂದಿ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತವೆ. **ಹುದ್ದೆ** | **ಮಂಜೂರಾದ ಹುದ್ದೆ** | **ಭರ್ತಿಯಾದ ಹುದ್ದೆಗಳು** | **ಖಾಲಿ ಇರುವ ಹುದ್ದೆಗಳು** ಬೋಧಕ | 715 | 245 | 470 ಬೋಧಕೇತರ | 1384 | 256 | 1128 ಈ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ ಸಂಬಂಧ

		ಸರ್ಕಾರವು ದಿನಾಂಕ 11-12-2019 ರಂದು ನೇಮಕಾತಿ ಅಧಿಸೂಚನೆಗೆ ಅನುಮತಿಯನ್ನು ನೀಡಿರುತ್ತದೆ. ಆದರೆ ಸದರಿ ನೇಮಕಾತಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಆರ್ಥಿಕ ಮಿತವ್ಯಯದ ಹಿನ್ನಲೆಯಲ್ಲಿ ಸರ್ಕಾರವು ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದಿರುತ್ತದೆ. ಪುನ: ವಿಶ್ವವಿದ್ಯಾಲಯವು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮತಿ ನೀಡುವಂತೆ ಕೋರಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯು ಅನುಮತಿ ನೀಡಿದ ಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಸಂಖ್ಯೆ: ಪಸಂಮೀ ಇ-52 ಪಲಸೇ 2021

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು

ಅನುಬಂಧ

ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಒದಗಿಸಿರುವ ಅನುದಾನ ಹಾಗೂ ಖರ್ಚಾದ ಹಣದ ವಿವರಗಳು

Sl. No	Year	Opening Balance (Rs. in lakhs)	Grants Released (Rs. in lakhs)	Expenditure (Rs. in lakhs)	Closing Balance (Rs. in lakhs)
1	2	3	4	5	6=(3+4)-5
1	2004-05	0	207.75	55.92	151.83
2	2005-06	151.83	500.00	350.37	301.46
3	2006-07	301.46	1598.39	1201.84	698.01
4	2007-08	698.01	3650.56	2461.61	1886.96
5	2008-09	1886.96	2221.00	1999.20	2108.76
6	2009-10	2108.76	3561.75	2687.43	2983.07
7	2010-11	2983.07	2275.00	2250.39	3007.68
8	2011-12	3007.68	4155.00	4621.61	2541.07
9	2012-13	2541.07	6167.25	6231.54	2476.78
10	2013-14	2476.78	8580.65	6107.00	4950.43
11	2014-15	4950.43	7937.03	5978.61	6908.85
12	2015-16	6908.85	4000.00	6776.93	4131.92
13	2016-17	4131.92	4000.00	5962.64	2169.28
14	2017-18	2169.28	4000.00	5773.42	395.86
15	2018-19	395.86	1606.00	3590.82	-1588.96
16	2019-20	-1588.96	4729.50	4223.53	-1082.99
17	2020-21	-1082.99	1000.00	1153.32	-1236.31

ಸಂಖ್ಯೆ: ಪಸಂಮೀ ಇ-52 ಪಅಸೇ 2021